**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 01.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ.ಪಿ ಎಲ್ ಎಸ್ ವಕೀಲರಿಂದಃ**

ಈ ದಾವೆ ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಪ್ರತಿವಾದಿ ನಂ.1 ಮತ್ತು 2 ನನ್ನ ಅತ್ತೆ ಮಾವ ಹಾಗೂ ಪ್ರತಿವಾದಿ ನಂ.3 ನನ್ನ ಗಂಡ, ಪ್ರತಿವಾದಿ ನಂ.4 ರಿಂದ 6 ನನ್ನ ನಾದಿನಿಯವರು. ನನ್ನ ಗಂಡ ಅವರ ತಂದೆ ತಾಯಿಗೆ ಒಬ್ಬನೆ ಗಂಡು ಮಗ ಎಂದರೆ ಸರಿ. ಈ ದಾವೆ ಸಲ್ಲಿಸುವ ಸಮಯದಲ್ಲಿ ನಾನು ನನ್ನ ಗಂಡನ ಮನೆಯಲ್ಲಿಯೇ ವಾಸವಿದ್ದೇನು. ಈ ದಾವೆ ಸಲ್ಲಿಸುವಾಗ ನನ್ನ ಗಂಡನ ಜೊತೆಯೇ ವಾಸವಿದ್ದೇನು. ನನ್ನ ಹಾಗೂ ನನ್ನ ಗಂಡ ಮಧ್ಯ ಮನಸ್ತಾಪ ಇತ್ತು. ನಮ್ಮ ಮಗ ನಮ್ಮ ಜೊತೆಯೇ ಇದ್ದ ಎಂದರೆ ಸರಿ. ವಾದಿ ನಂ.1 ನಮ್ಮ ಮಗ ನಮ್ಮ ಜೊತೆಯಲ್ಲಿಯೇ ಇದ್ದು ಶಾಲೆಗೆ ಹೋಗುವುದು ಬರುವುದು ಮಾಡುತ್ತಾನೆ.

2. ನನ್ನ ಹಾಗೂ ಪ್ರತಿವಾದಿ ನಂ.3 ಇವರ ಮದುವೆ ಮಾರ್ಚ 2017 ನೇ ಇಸ್ವಿಯಲ್ಲಿ ಆಗಿರುತ್ತದೆ. ಮದುವೆಯಾದ ನಂತರ ನೀವು ವಾದಪತ್ರದ ವಿಳಾಸದಲ್ಲಿ ನಿಮ್ಮ ಗಂಡನ ಜೊತೆ ಸಂಸಾರ ಮಾಡಲು ಹೋಗಿರುತ್ತೀರಿ ಎಂದರೆ ಸಾಕ್ಷಿ ಮೊದಲು ಬೇರೆ ಕಡೆ ವಾಸವಿದ್ದೇವು ಹಾಗೂ 6 ತಿಂಗಳ ನಂತರ ಅಂದರೆ ಮನೆ ಕಟ್ಟಿದ ನಂತರ ಅಲ್ಲಿ ವಾಸ ಮಾಡಲು ಹೋದೆವು ಎಂದು ನುಡಿಯುತ್ತಾರೆ. ದಾವಾ ಶೀರ್ಷಿಕೆಯಲ್ಲಿ ತೋರಿಸಿರುವ ವಿಳಾಸದಲ್ಲಿರುವ ಮನೆ ದಾವಾ ಶೆಡ್ಯೂಲ್ - ಬಿ ಆಸ್ತಿ ಎಂದರೆ ಸರಿ. ಸದರಿ ಆಸ್ತಿ ಮೊದಲು ನಿವೇಶನ ಆಗಿತ್ತು ಅದನ್ನು ಪ್ರತಿವಾದಿ ನಂ.3 ಇವರ ಹೆಸರಿನಲ್ಲಿ ಖರೀದಿಸಲಾಗಿದೆ. ನನ್ನ ಮಾವನಿಗೆ ಸೇರಿದ

ಕಲಹಾಳದಲ್ಲಿದ್ದ ಪಿತ್ರಾರ್ಜಿತ ಮನೆ ಹಾಗೂ ದಾವಾ ಶೆಡ್ಯೂಲ್-ಸಿ ಆಸ್ತಿಯಿಂದ ಬಂದ ಆದಾಯದಿಂದ ನನ್ನ ಗಂಡನ ಹೆಸರಿನಲ್ಲಿ ದಾವಾ ಶೆಡ್ಯೂಲ್-ಬಿ ನಿವೇಶನವನ್ನು ಖರೀದಿಸಿರುತ್ತದೆ. ಈ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಸದರಿ ಮನೆ ಕಟ್ಟಲು ಪ್ರತಿವಾದಿ ನಂ.3 ಇವರ ಹೆಸರಿನಲ್ಲಿ ಪರವಾನಿಗೆ ಪಡೆದಿರುತ್ತದೆ ಎಂದರೆ ಸರಿ. 2013 ರಲ್ಲಿ ಸದರಿ ಮನೆ ಕಟ್ಟಲು ಪ್ರಾರಂಭಿಸಿರುತ್ತೇವೆ. ಸದರಿ ಮನೆ ಸಾಲ ಪ್ರತಿವಾದಿ ನಂ.3 ಇವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿ ನಂ.3 ಇವರ ವೇತನ ಕಡಿಮೆ ಇತ್ತು ಹಾಗೂ ನಾನು ಸಹ ನೌಕರಿ ಮಾಡುತ್ತಿದ್ದೆ, ನಾನು ಗಳಿಸಿದ ದುಡ್ಡನ್ನು ಅವರೇ ತೆಗೆದುಕೊಳ್ಳುತ್ತಿದ್ದರು ಹಾಗೂ ಸಾಲ ತುಂಬುವ ಪೂರ್ವದಲ್ಲಿ ನನ್ನ ಖಾತೆಯಿಂದ ಅವರ ಖಾತೆಗೆ ಮೊತ್ತ ಜಮಾ ಆಗಿದೆ ಎಂದು ನುಡಿಯುತ್ತಾರೆ. ಸದರಿ ಸಾಲ ಪ್ರತಿವಾದಿ ನಂ.3 ಇವರ ಖಾತೆಯಿಂದ ಕಡಿತಗೊಳ್ಳುತ್ತಿತ್ತು ಎಂದರೆ ಸರಿ. ಸಾಕ್ಷಿಗೆ ಪ್ರತಿವಾದಿ ನಂ.3 ಇವರಿಗೆ ಸೇರಿದ HDFC Bank ನ statement of account ನ ಆನ್ ಲೈನ್ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಗಳು ಪ್ರತಿವಾದಿ ನಂ.3 ಇವರ ಖಾತೆಗೆ ಸಂಬಂಧಿಸಿದ್ದು ಎಂದು ಉತ್ತರಿಸುತ್ತಾರೆ. ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ಸಾಲಕ್ಕೆ ಮೊದಲು 19 ಸಾವಿರ ರೂ.ಗಳಂತೆ ಇಎಂಐ ಕಡಿತವಾಗುತ್ತಿತ್ತು ನಂತರ 22 ಸಾವಿರ ರೂ. ಆಯಿತು. ಸದರಿ ಸಾಲದ ಖಾತೆ ಇನ್ನೂ ಮುಕ್ತಾಯಗೊಂಡಿಲ್ಲ ಎಂದರೆ ಸಾಕ್ಷಿ ಈಗ ಏನಾಗಿದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ ನಂ.3 ಇವರಿಗೆ ಮನೆ ಕಟ್ಟಲು ಹಣ ಕೊಟ್ಟಿರುತ್ತೇನೆ ಹಾಗೂ ಸಾಲದ ಕಂತುಗಳನ್ನು ತುಂಬಲು ಹಣ ವರ್ಗಾವಣೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ ನಿಪಿ.8 ದಾಖಲೆ ಹಾಗೂ ಮನೆ ಕಟ್ಟುವ

ವ್ಯವಹಾರಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

3. ದಾವಾ ಶೆಡ್ಯೂಲ್ ಬಿ ಆಸ್ತಿ ಪ್ರತಿವಾದಿ ನಂ.1 ರಿಂದ 3 ಇವರ ಹೆಸರಿನಲ್ಲಿ ಜಂಟಿಯಾಗಿದೆ. ಪ್ರತಿವಾದಿ ನಂ.3 ಈಗ ಪ್ರತಿವಾದಿ ನಂ.1 ಮತ್ತು 2 ರವರ ಹೆಸರುಗಳನ್ನು ಸದರಿ ಆಸ್ತಿಗೆ ಸೇರಿಸಿರುತ್ತಾರೆ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು ಪ್ರತಿವಾದಿ ನಂ.3 ಇವರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು ಪ್ರತಿವಾದಿಯರಿಗೆ ನಮ್ಮ ನಿಮ್ಮ ಸಂಬಧ ಸರಿ ಇಲ್ಲ ಹಾಗೂ ಆಸ್ತಿಯಲ್ಲಿ ಪಾಲು ಮಾಡಬೇಕೆಂದು ನೋಟೀಸ್ ನೀಡಿಲ್ಲ. ವಾದಿ ನಂ.1 ಇವರ ಶಾಲಾ ಫೀಸ್ ನ್ನು ಪ್ರತಿವಾದಿ ನಂ.3 ಇವರೇ ಕೊಡುತ್ತಿದ್ದಾರೆ ಎಂದರೆ ಸಾಕ್ಷಿ ಎಲ್ ಕೆ ಜಿ, ಯು ಕೆ ಜಿ ವರೆಗೆ ಕೊಡುತ್ತಿದ್ದರು ಆದರೆ 1 ನೇ ತರಗತಿಯಿಂದ ಕೊಡುತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆ ಸಲ್ಲಿಸಿದ ನಂತರ ನಾನು ಪ್ರತಿವಾದಿ ನಂ.3 ಇವರ ವಿರುದ್ಧ ಜೀವನಾಂಶ ಕೇಳಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ.

4. ನನ್ನ ಊರು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಲ್ಲಿದೆ. ನನ್ನ ತಾಯಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಇದ್ದಾರೆ. ನನ್ನ ತಂದೆ ಶೇತ್ಕಿ ಕೆಲಸ ಮಾಡುತ್ತಾರೆ ಅವರಿಗೆ 10 ಎಕರೆ ಜಮೀನು ಇದೆ. ನನ್ನ ತಂದೆಗೆ ನಾವು 3 ಜನ ಹೆಣ್ಣು ಮಕ್ಕಳು ಹಾಗೂ 2 ಗಂಡು ಮಕ್ಕಳು. ನಾನು ಎಂಬಿಎ ಹುಬ್ಬಳ್ಳಿಯಲ್ಲಿ ಓದಿರುತ್ತೇನೆ. ಅದರ ಮುಂಚೆ ಬಿಜಾಪುರ ಜಿಲ್ಲೆಯಲ್ಲಿ ಓದಿರುತ್ತೇನೆ. 2014 ರಲ್ಲಿ ಹುಬ್ಬಳ್ಳಿಯಲ್ಲಿ ಎಂಬಿಎ ಮಾಡುತ್ತಿದ್ದೇನು. ಆಗ ನಾನು ಪಿಜಿಯಲ್ಲಿ ವಾಸವಿದ್ದೇನು. 2016 ರಲ್ಲಿ ನನಗೆ ನೌಕರಿ ಸಿಕ್ಕಿತು. ಕೆಲಸಕ್ಕೆ ಸೇರಿ ಒಂದು ವರ್ಷದ ನಂತರ ನನ್ನ ಮದುವೆಯಾಗಿರುತ್ತದೆ. ನನ್ನ ಖರ್ಚು ವೆಚ್ಚಗಳನ್ನು ನಾನು ನನ್ನ ವೇತನದಿಂದಲೇ ನೋಡಿಕೊಳ್ಳುತ್ತಿದ್ದೇನು. ನನ್ನ ಮದುವೆ ಸಮಯದಲ್ಲಿ ನನ್ನ ಹತ್ತಿರ ಎಷ್ಟು

ಹಣ ಇತ್ತು ಎಂದು ತೋರಿಸಲು ಪ್ರತಿವಾದಿ ನಂ.3 ಇವರಿಗೆ ಯಾವುದೇ ಸ್ಟೇಟ್ಮೆಂಟ್ ನೀಡಿಲ್ಲ. ನೀವು ಪ್ರತಿವಾದಿ ನಂ.3 ಇವರಿಗೆ ಮನೆ ಖರೀದಿಸಲು ಹಣ ಕೊಟ್ಟಿರುತ್ತೀರಿ ಎಂದು ಹೇಳಿದ್ದು ಅದರಲ್ಲಿ ನಿಮಗೂ ಸಹ ಹಿಸ್ಸೆ ಬೇಕು ಎಂದು ಹೇಳಿ ಅವರ ಜೊತೆ ಖರೀದಿ ಕರಾರುಪತ್ರ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ನಾನು ಮಾಡಿಕೊಡಿ ಎಂದು ಕೇಳಿದೆ ಆದರೆ ಅವರು ಮಾಡಿಕೊಡಲ್ಲಿಲ್ಲ ಎಂದು ನುಡಿಯುತ್ತಾರೆ.

5. ದಾವಾ ಶೆಡ್ಯೂಲ್-ಬಿ ಆಸ್ತಿಯ ಪೂರ್ಣದಲ್ಲಿ ಮನೆ ಇದೆ. ಕೆಳಗಡೆ ಒಂದು ಮನೆ ಹಾಗೂ ಮೇಲೆ ಎರಡು ಮನೆಗಳು ಇವೆ. ಸದರಿ ಮನೆ ಕಟ್ಟಲು ಎಷ್ಟು ಖರ್ಚು ಬಂತು ಎಂದು ನನಗೆ ನೆನಪಿಲ್ಲ. ಸದರಿ ಮನೆ ಕಟ್ಟಲು ಪ್ರತಿವಾದಿ ನಂ.1 ಮತ್ತು 2 ಸಹ ಹಣ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ನನ್ನ ತಂದೆ ಹಾಗೂ ಅವರ ಸಹೋದರ ಸ್ವಲ್ಪ ಸ್ವಲ್ಪ ಹಣ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಅಥವಾ ನನ್ನ ತಂದೆಯ ಸಹೋದರ ಹಣ ಕೊಟ್ಟರು ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ ಕಾರಣ ಅವರು ನಗದು ರೂಪದಲ್ಲಿ ಹಣ ಕೊಟ್ಟಿರುತ್ತಾರೆ. ಈ ವಿಷಯವನ್ನು ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್-ಬಿ ಆಸ್ತಿಯನ್ನು ಹೊರತುಪಡಿಸಿ ಪ್ರತಿವಾದಿಗಳಿಗೆ ಅವರ ಕುಟುಂಬಕ್ಕೆ ವಾಸ ಮಾಡಲು ಬೇರೆ ಆಸ್ತಿ ಇಲ್ಲ ಎಂದರೆ ಸಾಕ್ಷಿ ಹುಬ್ಬಳ್ಳಿಯಲ್ಲಿ ಇದೇ ಒಂದು ಮನೆ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳ ಮಧ್ಯ ಇನ್ನೂ ಯಾವುದೇ ರೀತಿಯ ವಾಟ್ನಿಯಾಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ನಂ.1 ನನಗೆ ಹಾಗೂ ಪ್ರತಿವಾದಿ ನಂ.3 ಇವರಿಗೆ ಒಬ್ಬನೇ ಮಗ ಎಂದರೆ ಸರಿ.

6. ದಾವಾ ಶೆಡ್ಯೂಲ್-ಸಿ ಆಸ್ತಿ ಮುಂಚೆ ಪ್ರತಿವಾದಿ ನಂ.3 ಇವರ ಹೆಸರಿನಲ್ಲಿತ್ತು ಈಗ ಅವರು ಅದನ್ನು ಪ್ರತಿವಾದಿ ನಂ.1 ಇವರ ಹೆಸರಿನಲ್ಲಿ ಮಾಡಿರುತ್ತಾರೆ. ಆರ್ ಎಸ್ ನಂ. 35

ಪ್ರತಿವಾದಿ ನಂ.2 ಇವರ ಹೆಸರಿನಲ್ಲಿದೆ ಎಂದರೆ ಸರಿ. ಈ ಎರಡೂ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದು ತೋರೀಸಲು ನೀವು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಹಾಜರಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

7. ಶಿವಯ್ಯ ಇವರು ಪ್ರತಿವಾದಿ ನಂ.1 ಇವರ ತಂದೆಯಾಗಿರುತ್ತಾರೆ. ದಾವಾ ದಾವಾ ಶೆಡ್ಯೂಲ್-ಸಿ ಆಸ್ತಿ ಸದರಿ ಶಿವಯ್ಯ ಇವರಿಗೆ ಅವರ ತಂದೆ ಕಡೆಯಿಂದ ಬಂದಿರುತ್ತದೆ. ಈ ವಿಷಯ ಸುಳ್ಳು ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್-ಬಿ ಮತುತ ಸಿ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳು ಹಾಗೂ ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಈಗಲೂ ಜೀವಂತ ಇರುವ ಕಾರಣ ಈ ಎರಡು ಆಸ್ತಿಗಳಲ್ಲಿ ನನಗೆ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್-ಬಿ ಆಸ್ತಿಯಲ್ಲಿ ನನಗೆ ಅರ್ಧ ಹಿಸ್ಸೆ ಬರಬೇಕು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್-ಸಿ ಆಸ್ತಿಯಲ್ಲಿ ಪಾಲು ಕೇಳಲು ನಿಮಗೆ ಹಕ್ಕಿಲ್ಲ ಎಂದರೆ ಸಾಕ್ಷಿ ವಾದಿ ನಂ.1 ಇದ್ದಾರೆ ಎಂದು ನುಡಿಯುತ್ತಾರೆ. ವಾದಿ ನಂ.1 ನನ್ನ ಹಾಗೂ ಪ್ರತಿವಾದಿ ನಂ.3 ಇವರ ಜೊತೆಯೇ ವಾಸವಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ನೀಡಲು ಒಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳದ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂ.4 ರಿಂದ 6 ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು).**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**